ಸಕಲೇಶಪುರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯದಲ್ಲಿ.

**ಸಿ ಸಿ ನಂ. 165/2019**

ಪಿರ್ಯಾದುದಾರರು : ಸಕಲೇಶಪುರ ನಗರ ಠಾಣಾ ಪೊಲೀಸರು,

- ವಿರುದ್ಧ –
-

ಆರೋಪಿಗಳು :

1. ಅಸಿಫ್ ಅಲಿ ಬಿನ್ ಶೇಖ್‌ಬ್ಬ, 25 ವರ್ಷ, ಹಲಸುಲಿಗೆ ಗ್ರಾಮ, ಕಸಬಾ ಹೋಬಳಿ, ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ.

2. ಸಲ್‌ಮನ್ ಪ್ಯಾರೀಸ್ ಬಿನ್ ಅಬುಬಕರ್ 27 ವರ್ಷ, ಬಿಲಲ್ ಮಸೀದಿ ಹತ್ತಿರ, ಸಕಲೇಶಪುರ ಟೌನ್, ಹಾಸನ ಜಿಲ್ಲೆ.

3. ಮಹಮದ್ ಸಲೀಂ ಬಿನ್ ಮಹಮದ್ ರಫೀಕ್ 28 ವರ್ಷ, ಹಲಸುಲಿಗೆ ಗ್ರಾಮ, ಕಸಬಾ ಹೋಬಳಿ, ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ.

**: ದೋಷಾರೋಪಣೆ :**

ನಾನು, ಶ್ರೀಮತಿ. ಪೂರ್ಣಿಮಾ ಎನ್.ಪೈ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಸಕಲೇಶಪುರ, ನಿಮ್ಮ ವಿರುದ್ಧ ಈ ಕೆಳಗಿನಂತೆ ದೋಷಾರೋಪಣೆ ಹೊರಿಸಿರುತ್ತೇನೆ.

ದಿನಾಂಕಃ 13-07-2019 ರಂದು ಮದ್ಯಾಹ್ನ 12.30 ಗಂಟೆ ಸಮಯದಲ್ಲಿ ಸಕಲೇಶಪುರ ನಗರ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಆನೆಮಹಲ್ ಗ್ರಾಮದೊಳಗಿನ ರಸ್ತೆಯಲ್ಲಿ ಸಾಕ್ಷಿ 1 ರವರು ಅವರ ಬಾಬ್ತು ಟ್ರಾಕ್ಟರ್‌ನ್ನು

ತೆಗೆದುಕೊಂಡು ಬರುವಾಗ ಆರೋಪಿಗಳಾದ ನೀವುಗಳು ಆರೋಪಿ 1 ರವರು ರಸ್ತೆಗೆ ಅಡ್ಡಲಾಗಿ ಕಾರನ್ನು ನಿಲ್ಲಿಸಿದ್ದರಿಂದ ಸಾಕ್ಷಿ 1 ರವರು ಆರೋಪಿ 1 ರವರಿಗೆ ರಸ್ತೆಗೆ ಅಡ್ಡಲಾಗಿ ನಿಲ್ಲಿಸಿರುವ ಕಾರನ್ನು ತೆಗೆಯಿರಿ ಎಂದು ಕೇಳಿದಾಗ ಆರೋಪಿ 1 ರವರು ಸಾಕ್ಷಿ 1 ರವರನ್ನು ಉದ್ದೇಶಿಸಿ ಬೋಳಿಮಗನೇ ಕಾರು ನಂದು ಕಾಣೋ ನಾನು ಎಲ್ಲಿಯೊದರೂ ನಿಲ್ಲಿಸಿಕೊಳ್ಳುತ್ತೇನೆಂದು ಅವಾಚ್ಯ ಶಬ್ದಗಳಿಂದ ಬೈದು ಶಾಂತಿಭಂಗವನ್ನು ಉಂಟುಮಾಡಿರುತ್ತೀಯ. ಹೀಗಾಗಿ, ನೀವುಗಳು ಭಾ.ದಂ.ಸಂ.ಕಲಂ 504 ಸಹವಾಚಕ 34 ರಡಿಯಲ್ಲಿ ಅಪರಾಧವನ್ನು ಎಸಗಿರುತ್ತೀರಾ.

ಎರಡನೆಯದಾಗಿ ಮೇಲೆ ಹೇಳಿದ ದಿನ, ಸ್ಥಳ, ಸಮಯದಲ್ಲಿ, ಆರೋಪಿಗಳಾದ ನೀವುಗಳು ಅಪರಾಧ ಮಾಡುವ ಉದ್ದೇಶದಿಂದ ಏಕಾಏಕಿ ಸಾಕ್ಷಿ 1 ರವರ ಮೂಗಿಗೆ ಮತ್ತು ಮೈಕೈಗೆ ಹೊಡೆದು ನೋವುಂಟುಪಡಿಸಿದಾಗ ಸಾಕ್ಷಿ 1 ರವರು ಚಿಕಿತ್ಸೆಗೆಂದು ಸಾಕ್ಷಿ 2 ರವರೊಂದಿಗೆ ಸಕಲೇಶಪುರ ಸರ್ಕಾರಿ ಆಸ್ಪತ್ರೆಯ ಆವರಣದೊಳಗೆ ಅದೇ ದಿನ ಮದ್ಯಾಹ್ನ 1 ಗಂಟೆ ಸಮಯದಲ್ಲಿ ಹೋಗುತ್ತಿದ್ದಾಗ ಅಲ್ಲಿಗೂ ಆರೋಪಿ 1 ರವರು ಆರೋಪಿ 2 ಮತ್ತು 3 ರವರೊಂದಿಗೆ ಹೋಗಿ ಸಾಕ್ಷಿ 1 ರವರಿಗೆ ಏನೋ ಬೋಳಿ ಮಗನೇ ಗಲಾಟೆ ಮಾಡುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈಯುತ್ತಾ ಆರೋಪಿ 1 ರಿಂದ 3 ರವರುಗಳು ಕೈಗಳಿಂದ ಸಾಕ್ಷಿ 1 ರವರ ಎದೆಗೆ ಬಲಕೈಗೆ ಹೊಡೆದು ನೋವುಂಟು ಪಡಿಸಿ ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು ನಂತರ ಜಗಳ ಬಿಡಿಸಲು ಹೋದ ಸಾಕ್ಷಿ 2 ರವರಿಗೊ ಆರೋಪಿಗೂ 1 ರಿಂದ 3 ರವರುಗಳು ಏನೋ ಬೋಳಿ ಮಗನೇ ಇವನ ಪರವಾಗಿ ಬಂದಿದ್ದೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈಯುತ್ತಾ ಸಾಕ್ಷಿ 1 ರವರ ಬಲಕೈ ತೋಳಿಗೆ ಹೊಡೆದು ನೋವುಂಟು ಪಡಿಸಿ ಸಾಮಾನ್ಯ ಸ್ವರೂಪದ ಗಾಯಪಡಿಸಿರುತ್ತೀರಾ. ಹೀಗಾಗಿ, ನೀವುಗಳು ಭಾ.ದಂ.ಸಂ.ಕಲಂ.323 ಸಹವಾಚಕ 34 ರಡಿಯಲ್ಲಿ ಅಪರಾಧವನ್ನು ಎಸಗಿರುತ್ತೀಯ.

ಸದರಿ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಡಿ ಬರುತ್ತವೆ ಹಾಗೂ ಸದರಿ ಅಪರಾಧಗಳಿಗಾಗಿ ನಿಮ್ಮಗಳನ್ನು ವಿಚಾರಣೆಗೆ ಗುರಿಪಡಿಸಿ ನಿರ್ದೇಶಿಸಿದ್ದೇನೆ.

ಸಕಲೇಶಪುರ
ದಿನಾಂಕಃ 28-07-2021

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಕಲೇಶಪುರ